# ಕಸಿಪ್ರವೀಣೆ ಇಂದಿರಾ!





■ ಸರೋಜಾ ಪ್ರಕಾಶ

'ಇದು ನೋಡಿ, ಹಲಸಿನ ರೆಂಬೆಯ ಚಿಗುರು ಬರಲಿರುವ ಮುಗುಳುಗಣ್ಣಿನ ಚೂಪು ತುದಿ(ಬಡ್) ಇರುವ ಇಂಥ ಭಾಗ ಆಯ್ದುಕೊಳ್ಳಬೇಕು... ಎಂದು ಕಣ್ಣುಕಸಿಗೆ ಸೂಕ್ತವಾದ ಭಾಗವಿರುವ ಹಲಸಿನ ರೆಂಬೆಯನ್ನು ಕತ್ತರಿಸಿ ತಂದರಾಕೆ. ಹತ್ತಾರು ತೊಟ್ಟೆಗಳಲ್ಲಿ ಹಲಸಿನ ಬೀಜದ ಗಿಡಗಳ ಗುಂಪಿನಿಂದ ಒಂದನ್ನು ಎತ್ತಿ ತಂದು ನಿಧಾನವಾಗಿ ರೆಂಬೆಯ ಕಣ್ಣಿನ ಸುತ್ತಲೂ ಚಾಕುವಿನಿಂದ ಗೀರಿ, ಮೀಟಿ ತೆಗೆದರು. ಅಡಿಗಿಡದ ಒಂದು ಬದಿಯಲ್ಲೂ ಅಷ್ಟೇ ಭಾಗವನ್ನು ಗೀರಿ ತೆಗೆದು ಬಡ್ ಅನ್ನು ಆ ಜಾಗದಲ್ಲಿಟ್ಟು ನಾಜೂಕಾಗಿ ಪ್ಲಾಸ್ಟಿಕ್ ಸುತ್ತಿದರು. ದಿನಕ್ಕೆ ಆರು ತಾಸು ಬಿಸಿಲು ಸಿಕ್ಕರೆ ಉತ್ತಮ. 40 ದಿನಗಳ ನಂತರ ಸುತ್ತಿದ ಪ್ಲಾಸ್ಟಿಕ್ ತೆಗೆದಾಗ ಹಸಿರು ಚಿಗುರು ಎದ್ದು ತೋರುತ್ತದೆ.




ಅವರು ಉತ್ತರ ಕನ್ನಡದ ಶಿರಸಿ ಬಳಿಯ ಹುಳಗೋಳದ ಇಂದಿರಾ. ಸ್ವಯಂ ಆಸಕ್ತಿಯಿಂದ ಕಸಿವಿಜ್ಞಾನವನ್ನು ಕಲಿತು, ನಿರಂತರ ಪ್ರಯೋಗಗಳನ್ನು ನಡೆಸುತ್ತಿದ್ದಾರೆ. ಅವರ ಪಾಲಿ ಹೌಸಿನೊಳಗೆ ಮರಿಗಿಡಗಳದ್ದೇ ಲೋಕ. ಒಂದೆಡೆ ಗೋಣಿಚೀಲದಲ್ಲಿ ಕಾಫಿ ಬೀಜಗಳನ್ನು ಇಟ್ಟಿದ್ದರು. ಕಾಫಿ ಹಣ್ಣಿನಿಂದ ಬೀಜಗಳನ್ನು ಬಿಡಿಸಿದ ಕೂಡಲೇ ಚೆನ್ನಾಗಿ ತೊಳೆದು ಬೂದಿಯಲ್ಲಿ ಹೊರಳಾಡಿಸಿ ಮಾರನೆಯ ದಿನವೇ ಕಣದಲ್ಲಿ ಬಿತ್ತಬೇಕು. ಪಕ್ಕದಲ್ಲಿ ಇನ್ನೂ ಹದಿನೈದು ದಿನಗಳ ಬೆಳವಣಿಗೆಯ ಚೆಂದದ ಮಿನಿಯೇಚರ್ ಏಲಕ್ಕಿ ಗಿಡಗಳು. ಅದರಾಚೆ ಮೇಲೇಳುತ್ತಿದ್ದ ಕಾಳುಮೆಣಸಿನ ಸಸಿಗಳು. ಇಷ್ಟೆಲ್ಲ ಏನು ಮಾಡ್ತೀರಿ? 'ನಮ್ಮ ತೋಟಕ್ಕೆ ಬೇಕಾದಷ್ಟನ್ನು ಬಳಸಿ ಉಳಿದಿದ್ದು ಮಾರುತ್ತೇನೆ' ಎಂದರು.

ಪಕ್ಕದ ಟೊಮ್ಯಾಟೊ ಸಾಲಿನಲ್ಲಿ ಕಾಯಿ ತುಂಬಿ ಬಾಗಿ